

## 282 ಪ್ರಯಾಣಿಕರ ರಕ್ಷಣೆಗೆ ಜೀವತೆತ್ತ

# ‘ಹೀರೊ’ಅಲ್–ಬಲೂಶಿ

ಗುಣಕ್ಕೆ ಮತ್ಸರವಿಲ್ಲ ಎನ್ನುವ ಮಾತಿದೆ. ಜಾಗತಿಕ ಅದರಲ್ಲೂ ಹಿಂಸೆಗೆ ಸಂಬಂಧಿಸಿದ ವಿದ್ಯಮಾನಗಳು ನಡೆದಾಗೆಲ್ಲ ಮಧ್ಯಪ್ರಾಚ್ಯ ದೇಶದ ಹೆಸರುಗಳೇ ಕೇಳಿ ಬರುತ್ತವೆ. ಈ ರಾಷ್ಟ್ರಗಳಲ್ಲಿ ಮಾನವೀಯತೆಯೇ ಇಲ್ಲ ಎನ್ನುವಂತೆ ಬಿತ್ತರಿಸುವುದು ಮಾಧ್ಯಮಗಳ ಚಾಳಿ ಎನ್ನುವಂತಾಗಿದೆ.

ಆಗಸ್ಟ್ 3 (2016) ರಂದು ನಡೆದ ವಿಮಾನ ದುರಂತದ ಕ್ಷಣಗಳ ಬಗೆಗಿನ ವಿಡಿಯೊ ವಿಶ್ವದೆಲ್ಲೆಡೆ ಸುದ್ದಿ ಮಾಡಿತು. ಸಾಮಾಜಿಕ ಜಾಲ ತಾಣಗಳ ಪರಿಭಾಷೆಯಲ್ಲಿ ಹೇಳುವುದಾದರೆ ಈ ವಿಡಿಯೊ ವೈರಲ್ ಆಗಿತ್ತು. ಅವಘಡದ ಸುದ್ದಿ ಪ್ರಮುಖ ಮಾಧ್ಯಮಗಳಲ್ಲಿ ಮತ್ತೆ ಮತ್ತೆ ಪ್ರಸಾರಗೊಂಡಿತು. ಆದರೆ ಅಪಘಾತದಲ್ಲಿ ಸಿಕ್ಕಿ ಹಾಕಿಕೊಂಡವರ ಜೀವರಕ್ಷಣೆಗೆ ತನ್ನ ಜೀವವನ್ನೇ ತೆತ್ತ ಫೈರ್ ಫೈಟರ್ (ಜಾಸಿಮ್ ಇಸಾ ಅಲ್–ಬಲೂಶಿ) ದೊಡ್ಡ ಸುದ್ದಿ ಆಗಲೇ ಇಲ್ಲ! ತಡವಾಗಿಯಾದರೂ ಸಾಮಾಜಿಕ ಜಾಲ ತಾಣಗಳಲ್ಲಿ ಫೈರ್ ಫೈಟರ್ ಬಗ್ಗೆ ಮೆಚ್ಚುಗೆಯ ಮಾತುಗಳು ವೈರಲ್ ಆದವು.

ಜಾಸಿಮ್ ಇಸಾ ಅಲ್–ಬಲೂಶಿ ತನ್ನ ಜೀವದ ಹಂಗು ತೊರೆದು ಬೆಂಕಿಗೆ ಆಹುತಿಯಾಗಲಿದ್ದ ಎಮಿರೇಟ್ಸ್ ಏರ್‌ಲೈನ್ ವಿಮಾನದ ಪ್ರಯಾಣಿಕರ ಜೀವ ಉಳಿಸಿದ. ದುಬೈ ಇಂಟರ್‌ನ್ಯಾಷನಲ್ ಏರ್‌ಪೋರ್ಟ್‌ನಲ್ಲಿ ನಡೆದ ಈ ಬೆಂಕಿ ದುರಂತದ ಘಟನೆ ಇಡೀ ಏಷ್ಯ ಖಂಡವನ್ನು ತಲ್ಲಣಗೊಳಿಸಿತ್ತು. ಇದರಲ್ಲಿ ಪ್ರಯಾಣಿಸುತ್ತಿದ್ದ 282 ಪ್ರಯಾಣಿಕರ ಪೈಕಿ ಬಹುತೇಕರು ಭಾರತೀಯರೇ ಆಗಿದ್ದರು. ದೇಶ, ಗಡಿ, ಧರ್ಮ ಲೆಕ್ಕಿಸದೇ ಅಲ್–ಬಲೂಶಿ ತನ್ನ ಕರ್ತವ್ಯ ಪ್ರಜ್ಞೆಯೇ ದೊಡ್ಡ ಧರ್ಮವೆಂದು ಭಾವಿಸಿ ಕಾರ್ಯಾಚರಣೆಗೆ ಇಳಿದಿದ್ದರಿಂದಲೇ ಪ್ರಯಾಣಿಕರ ಜೀವ ಉಳಿಯಿತು.



ಅಲ್–ಬಲೂಶಿ ಅಂತ್ಯಕ್ರಿಯೆಯಲ್ಲಿ ಸ್ವತಃ ರಸ್ ಅಲ್–ಖಯಮಾಹ್ ದೊರೆ ಎಚ್.ಎಚ್. ಶೇಖ್ ಮೊಹಮ್ಮದ್ ಬಿನ್ ಸೌದ್ ಬಿನ್ ಸಖ್ರ್ ಅಲ್ ಪಾಲ್ಗೊಂಡು ಜನಾಜಾ ನಮಾಜು (ಮೃತರ ಆತ್ಮಕ್ಕೆ ಶಾಂತಿ ಕೋರಿ ಸಲ್ಲಿಸುವ ನಮಾಜ್) ಸಲ್ಲಿಸಿದರು. ‘ರಾಷ್ಟ್ರದ ಸುರಕ್ಷತೆ ಕಾಳಜಿಯನ್ನು ಎತ್ತಿಹಿಡಿದ ಮತ್ತು ತನ್ನ ಕರ್ತವ್ಯ ಪ್ರಜ್ಞೆಯಿಂದ ತಾಯ್ನಾಡಿನ ಗೌರವಕ್ಕೆ ಜೀವವನ್ನೇ ಸಮರ್ಪಿಸಿದ ಅಲ್–ಬಲೂಶಿ ದೇಶದ ಮಾದರಿ ವ್ಯಕ್ತಿ’ ಎಂದು ದೊರೆ ಬಣ್ಣಿಸಿದ್ದು ಅಕ್ಷರಶಃ ಒಬ್ಬ ಹುತಾತ್ಮನಿಗೆ ಸಲ್ಲಬೇಕಾದ ನಿಜದ ಗೌರವ. ಅಲ್–ಬಲೂಶಿಗೆ ಹಿಂದುಸ್ತಾನದ ಪರವಾಗಿಯೂ ಒಂದು ದೊಡ್ಡ ಸಲಾಂ.

ದೇಹ, ಮೂಗಿನ ಕೆಳಗಿರುವ ಎಲ್ಲ ಚಕ್ರಗಳು ಸೇರಿ ವಿಮಾನ ನೆಲ ಮುಟ್ಟಿದಾಗ ಆಧರಿಸುತ್ತವೆ. ಬಹಳ ಅಂದರೆ ಬಹಳ ಅಪೂರ್ವಕ್ಕೆ ತಾಂತ್ರಿಕ ಕಾರಣಗಳನಿಂದ ಈ ಚಕ್ರಗಳು ಹೊರಗೆ ಚಾಚಿಕೊಳ್ಳದಿದ್ದರೆ ವಿಮಾನ ತನ್ನ ನೀಳ ಹೊಟ್ಟೆಯ ಮೇಲೆ ಆಧರಿಸಿ ಇಳಿಸಬೇಕಾಗುತ್ತದೆ. ಇದೇ **belly landing.** ಇಳಿಯುವ ಪಥಕ್ಕೆ (**runway** ) ದೇಹವನ್ನು ಉಜ್ಜುತ್ತಾ ಒಂದಷ್ಟು ದೂರ ಸಾಗಿ ವಿಮಾನ ನಿಲ್ಲುತ್ತದೆ. ಈ ಪ್ರಕ್ರಿಯೆಯಲ್ಲಿ, ವಿಮಾನದ ದೇಹಕ್ಕೂ ನೆಲಕ್ಕೂಆಗುವ ಘರ್ಷಣೆ, ಆಘಾತದಿಂದ ರೆಕ್ಕೆಗಳು ಮುರಿದು, ರೆಕ್ಕೆಯೊಳಗೆ ಇರುವ ಇಂಧನ ಸಂಗ್ರಹಕ್ಕೆ (**fuel tank** ) ಬಿಸಿ ಹತ್ತಿ ಇಡೀ ವಿಮಾನಕ್ಕೆ ಒಂದೆರಡು ನಿಮಿಷದಲ್ಲಿ ಬೆಂಕಿ ಹಿಡಿಯುವ ಸಂಭವ ಹೆಚ್ಚು.

ಹೊಸ ವಿಮಾನವೊಂದು ಸಾವಿರಗಟ್ಟಲೆ ಬಿಡಿ ಭಾಗಗಳನ್ನು ಜೋಡಿಸಿಕೊಂಡು ಆಕಾಶಕ್ಕೇರುವ ಮೊದಲು ವಿವಿಧ ಪರೀಕ್ಷೆಗೊಳಪಡಬೇಕಾಗುತ್ತದೆ. ಈ ಪರೀಕ್ಷೆಗಳಲ್ಲಿ ಒಂದು ಪರೀಕ್ಷೆ ಪ್ರಯಾಣಿಕರ ತುರ್ತು ನಿರ್ಗಮನಕ್ಕೆ ಸಂಬಂಧಿಸಿದ್ದು. ಅಕಾಸ್ಮಾತ್ ಎಲ್ಲೋ ಒಂದು ಯಾನದಲ್ಲಿ ಅವರೋಹಣ ವೈಫಲ್ಯದ ಘಟನೆಯನ್ನು ಊಹಿಸಿ, ವಿಮಾನಕ್ಕೆ ಆ ಸಮಯದಲ್ಲಿ ಬೆಂಕಿ ಹಿಡಿದೀತೆಂದು ಭಾವಿಸಿ, ನಿಂತ ವಿಮಾನದಿಂದ 90 ಸೆಕೆಂಡ್‌ಗಳಲ್ಲಿ ತುರ್ತು ನಿರ್ಗಮನ ಸಾಧ್ಯ ಎಂದು ರುಜುವಾತು ಪಡಿಸಬೇಕು. ಪರೀಕ್ಷಾರ್ಥವಾಗಿ ವಿಮಾನದ ಎಲ್ಲ ಆಸನಗಳನ್ನು ಭರ್ತಿ ಮಾಡಿಸಿ, ವಿಮಾನದೊಳಗೆ ಎಷ್ಟು ತುರ್ತು ನಿರ್ಗಮನ ದ್ವಾರಗಳಿವೆಯೋ ಅವುಗಳಲ್ಲಿ ಅರ್ಧದಷ್ಟು ದ್ವಾರಗಳನ್ನು ಮಾತ್ರ ತೆರೆದು, ಅಷ್ಟೂ ಪ್ರಯಾಣಿಕರು 90 ಸೆಕೆಂಡ್‌ಗಳಲ್ಲಿ ಹೊರ ಬರುವುದು ಸಾಧ್ಯವೇ ಎಂದು ನೋಡುತ್ತಾರೆ. ವಿಮಾನ ಸಿಬ್ಬಂದಿಗಳಿಗೂ ಪ್ರಯಾಣಿಕರನ್ನು ಆದಷ್ಟು ಬೇಗ ಹೊರ ಕಳುಹಿಸುವ ಬಗ್ಗೆ ತರಬೇತಿ ನೀಡಿರುತ್ತಾರೆ.

90 ಸೆಕೆಂಡ್‌ಗಳ ಈ ತುರ್ತು ನಿರ್ಗಮನ ವಿಮಾನ ಸಿಬ್ಬಂದಿಗಳಿಗೂ ಮತ್ತೆ ವಿಮಾನ ವಿನ್ಯಾಸಕ್ಕೂ ಜೊತೆಯಾಗಿ ಒಂದು ಸವಾಲು. ಈ ಪರೀಕ್ಷೆಯಲ್ಲಿ ಗೆದ್ದರೆ ಮಾತ್ರವೇ ವಿಮಾನಕ್ಕೆಆಕಾಶಕ್ಕೇರುವ ಪರವಾನಿಗೆ ಪತ್ರ ಸಿಗುತ್ತದೆ. ವಿಮಾನ ಕುಸಿದಿಳಿದು ನಿಂತ ಕೆಲವು ಕ್ಷಣದಲ್ಲಿ ವಿಮಾನಕ್ಕೆ ಬೆಂಕಿ ಹಿಡಿಯುವುದು ಬಹುತೇಕ ಖಚಿತ. ಹಾಗಾಗಿ 90 ಸೆಕೆಂಡ್ ಒಳಗೆ ಪ್ರಯಾಣಿಕರೆಲ್ಲರೂ ಹೊರಬೀಳಬೇಕಾದ್ದು ಅತ್ಯಂತ ಅನಿವಾರ್ಯ. ಇಂತಹ ತುರ್ತು ಪರಿಸ್ಥಿತಿಯಲ್ಲಿ, ವಿಮಾನದ ಒಳಗೆ ತಮ್ಮೊಟ್ಟಿಗೆ ತಂದ ಬ್ಯಾಗ್‌ಗಳಲ್ಲಿ ಎಷ್ಟೇ ಅಮೂಲ್ಯವಾದ ವಸ್ತು ಇದ್ದರೂ ಅವನ್ನು ಅಲ್ಲೇ ಮರೆತು ಶೀಘ್ರವಾಗಿ ತುರ್ತು ನಿರ್ಗಮನ ಬಾಗಿಲಿಂದ ಹೊರಬೀಳುವುದು ಬಹಳ ಅಗತ್ಯ.

2013 ರಿಂದ 2016ರ ನಡುವೆ ನಡೆದ ವಿಮಾನ ಅವರೋಹಣ ವೈಫಲ್ಯದ ಈ ಘಟನೆಗಳಲ್ಲಿ ಗಮನಕ್ಕೆ ಬಂದ ಸಾಮಾನ್ಯ ವರ್ತನೆಗಳು ವಿಮಾನ ಪ್ರಯಾಣ ಸುರಕ್ಷತೆಯ ದೃಷ್ಟಿಯಿಂದ ಹೊಸ ಅವಶ್ಯಕತೆಗಳನ್ನು ತೋರಿಸಿಕೊಟ್ಟಿವೆ. 90 ಸೆಕೆಂಡ್ ತುರ್ತು ನಿರ್ಗಮನ ಪರೀಕ್ಷೆಯಲ್ಲಿ ಭಾಗವಹಿಸುವ ಜನರು ಮತ್ತೆ ವಿಮಾನದ ದೈನಂದಿನ ಹಾರಾಟದಲ್ಲಿ ಪ್ರಯಾಣಿಸುವ ಜನರ ಮನೋಸ್ಥಿತಿ ಹಾಗೂ ವರ್ತನೆ ಒಂದೇ ಆಗಿರುವುದಿಲ್ಲ ಎಂದು ಈ ಎರಡು ಉದಾಹರಣೆಗಳು ತಿಳಿಸಿವೆ. ಸುರಕ್ಷತೆಯ ಸಿದ್ಧಾಂತವನ್ನರಿತ ತಜ್ಞರಿಂದ ಪರೀಕ್ಷೆಯಲ್ಲಿ ಉತ್ತೀರ್ಣವಾದ ವಿಮಾನ ವ್ಯವಸ್ಥೆ ಪ್ರಾಯೋಗಿಕ ಜಗತ್ತಿನಲ್ಲಿ ಹೇಗೆ ವಿಫಲವಾಗಿ ದುರಂತ ನಡೆದು ಹೋಗುವ ಸಾಧ್ಯತೆ ಇದೆ ಎಂದೂ ತೋರಿಸಿಕೊಟ್ಟಿದೆ .

ವಿಮಾನದೊಳಗೆ ಸಾವು ಬದುಕಿನ ನಡುವೆ ಕೆಲವೇ ಕ್ಷಣಗಳ ಅಂತರ ಇರುವ ಹೊತ್ತಲ್ಲೂ ವಿಡಿಯೋ ತೆಗೆಯುವ ಚಾಳಿಯನ್ನು ಮುಂದುವರೆಸಿದ ಪ್ರಯಾಣಿಕರ ಬಗ್ಗೆ ಆಕ್ರೋಶ– ತಾತ್ಸಾರಗಳು ವ್ಯಕ್ತವಾಗಿದ್ದರೂ ಸದ್ಯಕ್ಕೆ ಇದೇ ವಿಡಿಯೋವನ್ನು ಮುಂದೆ ಇಟ್ಟುಕೊಂಡು ವಿಮಾನ ತಯಾರಕರು, ವಿಮಾನ ಸುರಕ್ಷತಾ ಸಂಸ್ಥೆಗಳು ಮನಃಶಾಸ್ತ್ರಜ್ಞರು ಗಂಭೀರವಾಗಿ ಅಭ್ಯಾಸ ಮಾಡುತ್ತಿದ್ದಾರೆ. ತುರ್ತು ನಿರ್ಗಮನದ ಅಗತ್ಯತೆಗಳನ್ನು, ಆ ಸಂದರ್ಭ ದಲ್ಲಿ ಕಡ್ಡಾಯವಾಗಿ ಅನುಸರಿಸಬೇಕಾದ ಹೆಜ್ಜೆಗಳನ್ನು, ಈಗ ಬಳಕೆಯಲ್ಲಿ ರುವ ಸೂಚನೆಗಳಿಗಿಂತ ಹೆಚ್ಚು ಪರಿಣಾಮಕಾರಿಯಾಗಿ ದಿನವೂ ಬದಲಾಗುವ ಹೊಸ ಹೊಸ ಪ್ರಯಾಣಿಕರಿಗೆ ಹೇಗೆ ಮನದಟ್ಟು ಮಾಡಬಹುದು ಎಂದು ಚಿಂತಿಸುತ್ತಿದ್ದಾರೆ. ಕಳೆದ ನೂರು ವರ್ಷಗಳ ಇತಿಹಾಸದಲ್ಲಿ ಪ್ರತಿ ಅಪಘಾತ ದಿಂದ ಪಾಠ ಕಲಿತು, ಕಾಲಕ್ರಮೇಣ ಸುರಕ್ಷತೆಯನ್ನು ಹೆಚ್ಚಿಸಿಕೊಳ್ಳುತ್ತಾ ಬಂದು ವಿಮಾನಯಾನ ತನ್ನ ಕಲಿಕೆಯ ಪುಸ್ತಕಕ್ಕೆ ಇನ್ನೊಂದು ಹಾಳೆಯನ್ನು ಸೇರಿಸಿಕೊಳ್ಳಲು ಕಾಯುತ್ತಿದೆ.